# ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ


ಸಂ: ಸ.ಕಾ.ಅ.(ವಿ)/ಹಿ.ಸ/ಮಸ್ಕಿ/2021-22/1816

ದೂರವಾಣಿ ಸಂ : 08537-270231
ಮೋಬೈಲ್ : 9483127970
ಇ-ಅಂಚೆ : aeemaski@gmail.com

ರವರ ಕಛೇರಿ
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ
ಗು.ವಿ.ಸ.ಕಂ.ನಿ ಮಸ್ಕಿ

ದಿನಾಂಕ : 17.12.2021


## ಸಭೆಯ ನಡಾವಳಿಕೆ

ದಿನಾಂಕ 16.12.2021 ರಂದು ಶ್ರೀ ರಾಜೇಶ ವರ್ಮಾ, ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ವಿಭಾಗ ಜೆಸ್ಕಾಂ ಸಿಂಧನೂರು ಇವರ ಅಧ್ಯಕ್ಷತೆಯಲ್ಲಿ ಸಮಯ ಮುಂಜಾನೆ 11:00 ಗಂಟೆಗೆ ಮಸ್ಕಿ ಉಪ-ವಿಭಾಗ ಕಛೇರಿಯಲ್ಲಿ ನಡೆದ ವಿದ್ಯುತ್ ಗ್ರಾಹಕರ ಸಭೆಯ ನಡಾವಳಿಕೆಗಳು ಈ ಕೆಳಗಿನಂತಿರುತ್ತದೆ.

| | | |
|---|---|---|
| ಸಭೆಯ ಅಧ್ಯಕ್ಷತೆ | : | ಶ್ರೀ ರಾಜೇಶ ವರ್ಮಾ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ವಿಭಾಗ ಜೆಸ್ಕಾಂ ಸಿಂಧನೂರು. |
| ಉಪಸ್ಥಿತರಿದ್ದ ಅಧಿಕಾರಿಗಳು | : | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಸಹಾಯಕ ಅಭಿಯಂತರರು (ತಾಂತ್ರಿಕ), ಹಿರಿಯ ಸಹಾಯಕರು ಮತ್ತು ಉಪ-ವಿಭಾಗದ ವ್ಯಾಪ್ತಿಯ ಎಲ್ಲಾ ಶಾಖಾಧಿಕಾರಿಗಳು. |
| ಸಭೆ ನಡೆದ ಸ್ಥಳ | : | ಉಪ-ವಿಭಾಗ ಕಛೇರಿ ಮಸ್ಕಿ |

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಉಪ-ವಿಭಾಗ ಮಸ್ಕಿ ಇವರು ಸಭೆಯಲ್ಲಿ ಹಾಜರಿದ್ದ ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು(ವಿ) ಸಿಂಧನೂರು, ಮತ್ತು ಎಲ್ಲಾ ಶಾಖಾಧಿಕಾರಿಗಳಿಗೆ, ನೌಕರರಿಗೆ ಹಾಗೂ ಸಭೆಗೆ ಹಾಜರಾದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಸ್ವಾಗತವನ್ನು ಕೋರಿದರು.

**ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ಗ್ರಾಹಕರ ಕುಂದು ಕೊರತೆಯ ಅರ್ಜಿಗಳನ್ನು ಸ್ವೀಕರಿಸಲಾಯಿತು.**

**ಅರ್ಜಿ ಸಂ: 1**

ದಿನಾಂಕ : 16-12-2021 ರಂದು ಸಮಯ ಮುಂಜಾನೆ ಸುಮಾರು 11 ಗಂಟೆ ವಾರ್ಡ ನಂ. 12 ರಲ್ಲಿ ಟಿ.ಸಿ ಕೂಡಿಸುವ ಬಗ್ಗೆ ಸೋಮನಾಥ ನಗರದ ನಿವಾಸಿ ರಾಜಣ್ಣ ದೂರವಾಣಿ ಸಂ, 9986117560 ಇವರು ಮನವಿ ಸಲ್ಲಿಸಿದರು.

**ಕ್ರಮ :** ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಸಭೆಯಲ್ಲಿ ಹಾಜರಿದ್ದ ಮಸ್ಕಿ ಶಾಖೆಯ ಶಾಖಾಧಿಕಾರಿಗಳಿಗೆ ಮೇಲೆ ತಿಳಿಸಿರುವ ಸ್ಥಳಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಸೂಚಿಸಿರುತ್ತಾರೆ.

**ಅರ್ಜಿ ಸಂ: 2**

ಶ್ರೀಮತಿ ನಾಗರತ್ನಮ್ಮ ಗಾಂಧಿನಗರ ಆರ್.ಆರ್ ಸಂಖ್ಯೆ 83666 ಬಿಬಿಸಿ ಮೊತ್ತದ ನೋಟಿಸಿಗೆ ಕಾನೂನು ತಿಳುವಳಿಕೆ ನೋಟಿಸು ನೀಡಿರುತ್ತಾರೆ.

**ಕ್ರಮ:** ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಸಭೆಯಲ್ಲಿ ಹಾಜರಿದ್ದ ಮಸ್ಕಿ ಶಾಖೆಯ ಶಾಖಾಧಿಕಾರಿಗಳಿಗೆ ಆರ್.ಆರ್ ಸಂಖ್ಯೆ 83666 ಬಿಬಿಸಿ ಮೊತ್ತ ಪರಿಶೀಲಿಸಿ ವರದಿ ಸಲ್ಲಿಸಲು ಸೂಚಿಸಿರುತ್ತಾರೆ.

Scanned with CamScanner

**ಅರ್ಜಿ ಸಂ: 3**

ಶ್ರೀ ಅಮರೇಶ ನಾಗರಬೆಂಚಿ ಇವರು ಎಸ್.ಸಿ.ಪಿ/ಎಸ್.ಟಿ.ಪಿ ಯೋಜನೆಯ ಕಾಮಗಾರಿಯ ಅಂದಾಜು ಪತ್ರಿಕೆ ಸಂಖ್ಯೆ 234365 ಈ ಕಾಮಗಾರಿಯನ್ನು ಅತೀ ಶೀಘ್ರದಲ್ಲಿ ಕೈಗೊಳ್ಳಲು ಮನವಿ ಪತ್ರ ಸಲ್ಲಿಸಿದರು.

**ಕ್ರಮ:** ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಸಭೆಯಲ್ಲಿ ಹಾಜರಿದ್ದ ಮೆದಿಕಿನಾಳ ಶಾಖೆಯ ಶಾಖಾಧಿಕಾರಿಗಳಿಗೆ ಮೇಲೆ ತಿಳಿಸಿರುವ ಸ್ಥಳವನ್ನು ಪರಿಶೀಲಿಸಿ ವರದಿ ಸಲ್ಲಿಸಲು ಸೂಚಿಸಿರುತ್ತಾರೆ.

**ಅರ್ಜಿ ಸಂ: 4**

ಶ್ರೀ ಉದಯಕುಮಾರ ಇವರು ಸುಂಕನೂರು ಗ್ರಾಮದಲ್ಲಿ ಜೋತು ಬಿದ್ದ ಹಳೆಯ ವಿದ್ಯುತ್ ತಂತಿ ಮತ್ತು ಕಂಬಗಳನ್ನು ಬದಲಾಯಿಸಲು ಮನವಿ ಸಲ್ಲಿಸಿರುತ್ತಾರೆ.

**ಕ್ರಮ:** ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಸಭೆಯಲ್ಲಿ ಹಾಜರಿದ್ದ ಪಾಮನಕೆಲ್ಲೂರು ಶಾಖೆಯ ಶಾಖಾಧಿಕಾರಿಗಳಿಗೆ ಗ್ರಾಮದಲ್ಲಿ ಜೋತು ಬಿದ್ದಿರುವ ವಯರ್‌ಗಳನ್ನು ಮತ್ತು ಹಳೆಯ ಕಂಬಗಳನ್ನು ಪರೀಶಿಲಿಸಲು ತಿಳಿಸಿರುತ್ತಾರೆ ಮತ್ತು ಅಂದಾಜು ಪಟ್ಟಿ ಸಲ್ಲಿಸಲು ಸೂಚಿಸಿರುತ್ತಾರೆ.

**ಅರ್ಜಿ ಸಂ: 5** ಶ್ರೀಬಸವರಾಜ ಬಳಗನೂರ ರವರು ಗದ್ದಿ 100ಕೆವಿ ಪರಿರ್ವತಕಕ್ಕೆ ಹೆಚ್ಚುವರಿ 63ಕೆವಿ ಪರಿರ್ವತಕ ಅಳವಡಿಸಲು ಮನವಿ ಮಾಡಿರುತ್ತಾರೆ

**ಕ್ರಮ:** ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಸಭೆಯಲ್ಲಿ ಹಾಜರಿದ್ದ ಬಳಗನೂರ ಶಾಖೆಯ ಶಾಖಾಧಿಕಾರಿಗಳಿಗೆ ಮೇಲೆ ತಿಳಿಸಿರುವ ಸ್ಥಳವನ್ನು ಪರಿಶೀಲಿಸಿ ವರದಿ ಸಲ್ಲಿಸಲು ಸೂಚಿಸಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಜನ ಪ್ರತಿನಿಧಿಗಳು ವಿದ್ಯುತ್ ಗ್ರಾಹಕರು ಮತ್ತು ಸಾರ್ವಜನಿಕರಿಗೆ ಭಾಗ್ಯ ಜ್ಯೋತಿ ಮತ್ತು ಕುಟಿರ ಜ್ಯೋತಿ ಹಾಗೂ ನೀರಾವರಿ ಪಂಪ್ ಸೆಟ್ ಸ್ಥಾವರಗಳನ್ನು ಹೊಂದಿರುವ ಗ್ರಾಹಕರು ತಮ್ಮ ಆಧಾರ ಕಾರ್ಡ/ ಜಾತಿಯ ದೃಢಿಕರಣದ ವಿವರವನ್ನು ನೀಡಲು ತಿಳಿ ಹೇಳಲಾಯಿತು ಹಾಗೂ ವಿದ್ಯುತ್ ಅಪಘಾತಗಳ ತಡೆಗಟ್ಟುವಿಕೆ, ಮುಂಜಾಗೃತೆ ಕ್ರಮಗಳ ಬಗ್ಗೆ ಹಾಗು ವಿದ್ಯುತ್ ಸಂರಕ್ಷಣೆ ಬಗ್ಗೆ ತಿಳಿ ಹೇಳಲಾಯಿತು. ಅಂತಿಮವಾಗಿ ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ(ವಿ) ವಂದನಾರ್ಪಣೆಯ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ
ಜೆಸ್ಕಾಂ ಮಸ್ಕಿ

**ಪ್ರತಿಗಳನ್ನು ದಯಾಪರ ಮಾಹಿತಿಗೆ ಸಲ್ಲಿಸಲಾಗಿದೆ.**

1. ಮಾನ್ಯ ಮುಖ್ಯ ಅಭಿಯಂತರರು(ವಿ) ಕಾರ್ಯ ಮತ್ತು ಪಾಲನೆ ವಲಯ ಕಛೇರಿ ಜೆಸ್ಕಾಂ ಬಳ್ಳಾರಿ
2. ಮಾನ್ಯ ಅಧೀಕ್ಷಕ ಅಭಿಯಂತರರು(ವಿ) ಕಾರ್ಯ ಮತ್ತು ಪಾಲನೆ ವೃತ್ತ ಕಛೇರಿ ಜೆಸ್ಕಾಂ ರಾಯಚೂರು
3. ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ವಿಭಾಗ ಜೆಸ್ಕಾಂ ಸಿಂಧನೂರು
4. ಎಲ್ಲಾ ಶಾಖಾಧಿಕಾರಿಗಳು ಕಾ ಮತ್ತು ಪಾ ಜೆಸ್ಕಾಂ ಉಪ-ವಿಭಾಗ ಮಸ್ಕಿ
5. ಕಛೇರಿ ಕಡತಕ್ಕೆ

Scanned with CamScanner